ನಾಲಿಗೆಯ ಪಸೆ ಒಣಗಿತು. ಆದರೂ ನಿರಾಕರಿಸಿ ಅದಕ್ಕೆ ತಾನು ಕಾರಣವಲ್ಲವೆಂದೂ ಅವಳಿಗೆ ಅದೆಷ್ಟೋ ಮಂದಿಯ ಸಂಪರ್ಕವಿದೆಯೆಂದೂ ವಾದಿಸಿದ. ಅವಳ ಈ ಸ್ಥಿತಿಗೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಆತನೇ ಕಾರಣನೆಂದು ಹೇಳಿ ಅವನನ್ನು ಅಡಕತ್ತರಿಯಲ್ಲಿ ಸಿಲುಕಿಸಿದ ಅಧಿಕಾರಿಯ ಮುಂದೆ ವಾದ ಮಾಡಲಾರದೆ; ಮಾಡಿದರೂ ಅದರಿಂದ ತನ್ನ ಮರ್ಯಾದೆಯೇ ಮಣ್ಣುಪಾಲಾಗುವುದೆಂದು ತಿಳಿದು ಅಧಿಕಾರಿಗೆ ಕೈ ಜೋಡಿಸಿ ಪರಿಹಾರ ಸೂಚಿಸುವಂತೆ ಕೋರಿದ.

ಅಧಿಕಾರಿ ಕೂಡಿಸಿ, ಕಳೆದು, ಗುಣಿಸಿ, ಭಾಗಿಸಿ ತೂಗಿಸಿ ಮೊದಲೇ ಒಂದು ನಿರ್ಧಾರಕ್ಕೆ ಬಂದವನು ಇನ್ನೊಮ್ಮೆ ಠಾಣೆಗೆ ಬಂದು ಮಾತಾಡುವಂತೆ ಆ ದಿನ ಕಳುಹಿಸಿದ. ಮಂಜು ಇನ್ನೂ ಜಗಜ್ಜಾಹೀರಾಗದ ಮರ್ಯಾದೆಯ ಪ್ರಶ್ನೆಗೆ ಸೋತು ಸುಣ್ಣವಾದಂತೆ ಭಾರವಾದ ಹೆಜ್ಜೆಯಿಂದ ಅಲ್ಲಿಂದ ಕದಲಿದ.

ಮಾನಪ್ಪ ಪ್ರತ್ಯಕ್ಷಳನ್ನು ಕರೆಸಿದನೋ? ಅವಳೇ ಕಂಪ್ಲೇಂಟ್ ಕೊಟ್ಟ ವಾಯಿದೆ ಮುಗಿಯಿತೆಂದು ಬಂದಳೋ? ಅಂತೂ ತುಸು ಉಬ್ಬಿದ ಹೊಟ್ಟೆಯನ್ನು ಮುಂದು ಮಾಡಿಕೊಂಡು ಠಾಣೆ ಪ್ರವೇಶಿಸುತ್ತಲೇ ಅಧಿಕಾರಿ ಮರ್ಯಾದೆಯನ್ನು ಸೂಚಿಸಿ ಅವಳನ್ನು ಕುಳಿತುಕೊಳ್ಳುವಂತೆ ಹೇಳಿದ. ಮಾನಕ್ಕೆ ಅಂಜದ ಒಂದೊಮ್ಮೆ ಮನಸೋತಿದ್ದ ಹೆಣ್ಣು ಹಗೂರವಾಗಿ ಕುರ್ಚಿಯಲ್ಲಿ ಕೂತಾಗ ಇಂಟರ್‌ಕಾಮ್ ಒತ್ತಿ ಪಿಸಿಯನ್ನು ಕರೆದು ಎರಡು ಟೀ ತರುವಂತೆ ಹೇಳಿದ.

ಅಧಿಕಾರಿ ಅವಳಿಗೆ ಸಹಾಯ ಮಾಡುವ ಭರವಸೆಯನ್ನು ನೀಡಿದ್ದರಿಂದ ಅವಳಿಗೂ ಯಾವುದೇ ಭಯ, ಸಂಕೋಚಗಳಿರಲಿಲ್ಲ. ತನಗೆ ತೀರಾ ಹತ್ತಿರದ ಸಂಬಂಧಿಯೆನ್ನುವಂತೆ ಮಾತಾಡಿದಳು. ಅಧಿಕಾರಿ ಹೇಳಿದ್ದನ್ನು ಒಪ್ಪಿಕೊಂಡ ಮಂಜುವಿನ ವಿಷಯವನ್ನು ತಿಳಿಸಿ ಸಂತ್ರಸ್ತೆಯ ಮುಖದಲ್ಲಿ ಒಂದು ಸಂತೃಪ್ತಿಯ ಕಳೆಯನ್ನು ಮೂಡಿಸಿದ. ಅವಳು ಭಾವುಕಳಾಗಿ ಇನ್ನು ಮುಂದೆಯೂ ಅವನು ತನ್ನ ಜೊತೆಗೆ ನಿರಾತಂಕವಾಗಿ ಇರಬಲ್ಲನೇ? ಎನ್ನುವ ಅತೀ ದೂರದ ಆಸೆಯೊಂದನ್ನು ಹೊರಗೆಡವಿದಳು. ಅದರ ಬಗ್ಗೆ ಅಧಿಕಾರಿ ನಿಸೂರವಾಗಿ ಇಲ್ಲವೆನ್ನುವುದನ್ನು ಹೇಳಿದ. ಅದರಿಂದ ದ್ವೇಷ ಸಾಧನೆಯಾಗಿ ಅಪಾಯವಾಗಬಹುದೆನ್ನುವುದನ್ನು ಎಚ್ಚರಿಸಿದ. ಹಾಗಾದರೆ ತನ್ನ ಮುಂದಿನ ಜೀವನ? ಎನ್ನುವ ಪ್ರಶ್ನೆ ಎದುರಾಗುತ್ತಲೇ ಭಯವೂ ಆಯಿತು. ಅದೆಲ್ಲವನ್ನೇ ಲೆಕ್ಕ ಹಾಕಿ ಅವಳಿಗೆ ಜೀವನಾಂಶದಂತಹ ದೊಡ್ಡ ಮೊತ್ತವನ್ನೆ ನೀಡುವ ಭರವಸೆಯಿಂದಲೇ ಆ ರೀತಿ ಕಂಪ್ಲೇಂಟ್ ಕೊಡಲು ಹೇಳಿರುವುದನ್ನು ಮನದಟ್ಟು ಮಾಡಿ, ಅವಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿದ. ಅವಳಿಗೆ ಅಧಿಕಾರಿಯ ಮೇಲೆ ನಂಬಿಕೆಯುಂಟಾಯಿತು.

ದಿನದಿಂದ ದಿನಕ್ಕೆ ಗಾಳಿ ತುಂಬಿಸಿದ ಬಲೂನಿನಂತೆ ಅವಳ ಹೊಟ್ಟೆಯ ಸುತ್ತಳತೆ ಹೆಚ್ಚಾಗುತ್ತಾ ಹೋಯಿತು. ಅಧಿಕಾರಿ ಕೊಟ್ಟ ಭರವಸೆ ಹುಸಿಯಾಯಿತೇನೋ ಎಂದುಕೊಂಡು ನಿರಾಶೆ ಹೊಂದಿದವಳನ್ನು ಭೇಟಿಯಾಗಲು ಮಂಜುವೇ ಕಾರಿನಲ್ಲಿ ಬಂದಿಳಿದ. ಅವಳಿಗೆ ಆತ ತನಗೆ ಹಾಕಿದ್ದ ಬೆದರಿಕೆ ನೆನಪಾಯಿತು. ಅವಳು ಕದ ತೆರೆಯದೆ ಕಿಟಕಿಯಿಂದಲೇ ಇಣುಕಿದಳು. ಮನೆಯಲ್ಲಿ ಮಗ ಕೂಡ ಇರಲಿಲ್ಲ. ಅವನನ್ನು ಒಳಗೆ ಕರೆಯಬಹುದಾಗಿತ್ತೆಂದೆಣಿಸಿದರೂ ತನ್ನ ಜೀವಕ್ಕೆ ಅಪಾಯ ಮಾಡಿದರೆ ಎನ್ನುವ ಭಯವಿಲ್ಲದಿರಲಿಲ್ಲ.

ಮಂಜು ತೀರಾ ಸಪ್ಪೆ ಮೋರೆ ಹಾಕಿಕೊಂಡು ಕಿಟಕಿಯ ಹತ್ತಿರ ನಿಂತು ಅವಳನ್ನು ಎದುರಿಸಲಾರದೆ ಬಾಗಿಲು ತೆರೆದರೆ ಒಳಗೆ ಬರುವುದಾಗಿ ಹೇಳಿದ. ಅವಳು ಅಂತಹ ಆತಿಥ್ಯಕ್ಕೆ ತಿಲಾಂಜಲಿಯಿತ್ತಿರುವುದಾಗಿಯೂ ತನಗೂ ಅವನಿಗೂ ಯಾವುದೇ ಸಂಬಂಧವಿಲ್ಲವೆಂದೂ ಖಂಡತುಂಡವಾಗಿ ಹೇಳಿದಳು. ಅವನಿಗೆ ಅದೇನೋ ಧೈರ್ಯ ಹುಟ್ಟಿತು. ಅವನು ಮರು ಪ್ರಶ್ನೆ ಹಾಕಿದ. ಹಾಗಾದರೆ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಡುವ ಉದ್ದೇಶವೇನಿತ್ತೆಂದು ಕೇಳಿದ. ಅವಳು ಕಂಪ್ಲೇಂಟ್ ಕೊಡಲು ಹೋಗಿದ್ದಲ್ಲವೆಂದೂ ಎಫ್ಐಆರ್ ದಾಖಲಿಸಲು ಹೋದದ್ದೆಂದು ಹೇಳಿದಾಗ ಅವನ ಎದೆ ಧಸಕ್ಕೆಂದಿತು. ಅಷ್ಟೇ ಅಲ್ಲದೆ ಅವನು ಬಂದ ಉದ್ದೇಶವೇನೆಂದು ಕೇಳಿದಳು. ಅವನು ಕಾಂಪ್ರಮೈಸ್‌ಗೆ ಒಪ್ಪಿರುವುದಾಗಿ ಅದನ್ನು ತಿಳಿಸುವುದಕ್ಕಾಗಿ ಬಂದಿರುವುದಾಗಿ ಹೇಳಿದ. ಅವಳು ಕಿಟಕಿಯನ್ನು ಮುಚ್ಚುತ್ತಲೇ ಅದು ಠಾಣೆಯಲ್ಲಿಯೇ ಇತ್ಯರ್ಥವಾಗಲಿ ಎಂದು ಹೇಳಿದ್ದು ಅವನಿಗೆ ಸ್ಪಷ್ಟವಾಗಿ ಕೇಳಿಸಿತು. ಅವನು ಮೆಟ್ಟಲಿಳಿದು ಕಾರಿನ ಕಡೆಗೆ ನಡೆದ.

ಇನ್ನು ಉಳಿದಿದ್ದು ಒಂದೇ ದಾರಿ ಎಂದು ಠಾಣೆಯ